International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ಅಲ್ಲಮ ಪ್ರಭುದೇವರು ಮತ್ತು ವಿಚಾರ ಕ್ರಾಂತಿ

**ಡಾ. ಶುಭಾ ಮರವಂತೆ**

ಸಹ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ

ವಚನ ಯುಗದ ಒಂದು ವಿಸ್ಮಯವೆಂಬಂತೆ ಕಂಡು ಬಂದವರು ಅಲ್ಲಮ ಪ್ರಭುದೇವರು. ಬಸವಣ್ಣನವರ ಸೂಚನೆಯ ಮೇರೆಗೆ ಶೂನ್ಯ ಸಿಂಹಾಸನವನ್ನು ಏರಿದ ಅಲ್ಲಮ ಅಪ್ರತಿಮ ಸಾಧಕ. 'ಬಯಲು' ಪರಿಕಲ್ಪನೆಯನ್ನು ಮೊತ್ತ ಮೊದಲು ಪ್ರಚುರಪಡಿಸಿದ ಮಹಾತ್ಮ. ದೇಹವಿದ್ದೂ ಬಯಲಾಗುವುದು ಹೇಗೆ ಎನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟವರು ಅವರು. ಅಲ್ಲಮ ಪ್ರಭುದೇವರು ಸುಮಾರು ೧೧೬೦ ಇಲ್ಲೇ ನಮ್ಮ ಶಿಕಾರಿಪುರದ ಬಳ್ಳಿಗಾವೆಯಲ್ಲಿ ಹುಟ್ಟಿದ್ದು, ಎಂಬ ಚರಿತ್ರೆಯನ್ನು ಚಾಮರಸನ ಪ್ರಭುಲಿಂಗಲೀಲೆಯಲ್ಲಿ ನಾವು ಓದುತ್ತೇವೆ. ಪ್ರಭುದೇವರ ೧೬೭೦ ವಚನಗಳು ನಮಗೆ ಸಿಕ್ಕಿವೆ. ಒಂದೊಂದು ವಚನಗಳ ಅರ್ಥವೂ ನಮ್ಮೊಳಗೆ ಒಂದು ಹೊಸ ಸಂಚಲನವನ್ನು ಹುಟ್ಟಿಸುವ ಹಾಗಿದೆ. ಅಲ್ಲಮಪ್ರಭು ದೇವರ ವಚನಗಳನ್ನು ನಾವು ಓದುವಾಗ ನಿಜವಾದ ಅರ್ಥದಲ್ಲಿ ಅದು ಸಂಸ್ಕೃತಿಯ ವಿವೇಚನೆಯಾಗಿಯೂ ಕಾಣಿಸುತ್ತದೆ. 'ನಿನ್ನರಿವ ಹರಿಹಂಚಮಾಡಿ, ನೀನರಿ ಮರುಳೆ ಅನುಭಾವಿಯಾಡೆ' ಮೊದಲು ತನ್ನರಿವನ್ನು ಹಂಚಬೇಕು ಆ ಮೂಲಕ ತಿಳಿದುಕೊಳ್ಳಬೇಕು. ಈ ಅರಿವು ಕೇವಲ ಲೌಕಿಕ ತಿಳುವಳಿಕೆಗೆ ಮಾತ್ರ ಸೀಮಿತವಾಗದೆ ಅನುಭಾವಕ್ಕೂ ಕಾರಣವಾಗಬೇಕು; ವಿಚಾರ ಕ್ರಾಂತಿಗೂ ತೆರೆದುಕೊಳ್ಳಬೇಕು. ಆ ಹರಿಹಂಚು ಮಾಡುವ ಕಾರ್ಯವನ್ನು ಅಲ್ಲಮನ ಸಂಸ್ಕೃತಿ ಮೀಮಾಂಸೆಯ ಪರಿಭಾಷೆಯಲ್ಲಿ ಹೇಳುವುದಾದರೆ ಅದು ಶಬ್ದದಿಂದಾಚೆಯ ಅರ್ಥ ರೂಪಕ. ಸಾಹಿತ್ಯ ಮಾಧ್ಯಮದಲ್ಲಿ ಅಲ್ಲಮ ಹೇಳುವ ಪ್ರತಿ ಶಬ್ದ ಪರಿಕಲ್ಪನೆಯು ಹೊಳೆಯಿಸುವ ಅರ್ಥ ರೂಪಕಗಳು ನಿಜಕ್ಕೂ **'ಶಬ್ದಸಂಭ್ರಮ'**ವೇ ಸರಿ.

ಈ ಶಬ್ದ ಸಂಭ್ರಮ ಅಲ್ಲಮನ ವಚನಗಳ ನಿಜವಾದ ಶಕ್ತಿ. ವಚನಗಳ ಒಳಗೆ ಎಂಥ ನಿಗೂಢವಾದ ಒಂದು ಅರ್ಥವನ್ನು ಇಟ್ಟು ಪ್ರಭುದೇವರು ವಚನಗಳನ್ನು ಬರೆಯುತ್ತಾರೆಂದರೆ ಶಬ್ದದಾಚೆಗೆ ಅರ್ಥವು ವಿಜೃಂಭಿಸುತ್ತದೆ. 'ಎರಡೆಂಬತ್ತು ಕೋಟಿ ವಚನಗಳ ಹಾಡಿ ಹಾಡಿ ಹಲವ ಹಂಬಲಿಸಿತ್ತೆನ್ನ ಮನ' ಇದು ಆತ್ಮ ಶೋಧದ ಒಂದು ನೆಲೆ. ವಚನಕಾರರಲ್ಲಿ ಮೊದಲು ಕಾಣುವುದು ಆತ್ಮ ಸ್ವಪರೀಕ್ಷೆ. ಸ್ವನಿರೀಕ್ಷಣ. ನಿಜವಾದ ಅರ್ಥದಲ್ಲಿ ವಚನಕಾರರು ಬೋಧಕರಲ್ಲ. ನೀನು ಮಾಡು ನೀನು ಮಾಡು ಎನ್ನುವುದಕ್ಕಿಂತ ನಾನೇನು ಮಾಡಬೇಕಾಗಿದೆ ಅನ್ನುವುದನ್ನು ಚಿಂತಿಸಿದವರು. ಸೂಕ್ಷ್ಮವಾಗಿ ತನ್ನನ್ನು ತಾನು ವಿಡಂಬಿಸಿಕೊಳ್ಳುವುದು, ತನ್ನನ್ನು ತಾನು ಶೋಧಿಸಿಕೊಳ್ಳುವುದು ವಚನಗಳ ಮುಖ್ಯ ಗುರಿ. ಈ ವಿಡಂಬನೆಯಿಂದ ಇನ್ನೊಬ್ಬರಿಗೆ ನೋವಿಲ್ಲ; ಈ ವಿಡಂಬನೆಗಳಿಂದ ಇನ್ನೊಬ್ಬರಿಗೆ ಯಾವುದೇ ಅಪಮಾನವಿಲ್ಲ. ಈ ವಿಡಂಬನೆ ತನ್ನನ್ನ ತಾನು ಅರ್ಥೈಸಿಕೊಳ್ಳುವ ತನ್ನ ತಪ್ಪುಗಳನ್ನ ತಾನೇ ತಿದ್ದಿಕೊಳ್ಳುವ ಒಂದು ವಿವೇಕ. ಆ ಎಚ್ಚರ **'ಸೂಜಿಯ ಪೋಣಿಸಿದ ದಾರವ ಮರೆದಡೆ ಹೊಲಿಗೆ ಬಿಚ್ಚದೆ ಗುಹೇಶ್ವರಾ'** ಎಷ್ಟು ಸೂಕ್ಷ್ಮವಾದ ಮಾತು ಗಮನಿಸಬೇಕು. ಸೂಜಿ ಮತ್ತು ದಾರದ ರೂಪಕದ ಮೂಲಕ ಅಲ್ಲಮ ಹೇಳ ಹೊರಟಿರುವುದು ಬರಿ ಸೂಜಿಯಿಂದ ಹರಿದ ಬಟ್ಟೆಯನ್ನು ಹೊಲಿಯಲು ಸಾಧ್ಯವಿಲ್ಲ. ಅದರ ಹಿಂದಿನ ದಾರವಿದ್ದರೆ ಮಾತ್ರ ಹೊಲಿಗೆ ಪೂರ್ಣವಾಗಲು ಸಾಧ್ಯ. ಕಾಯಕ ಸಿದ್ಧಾಂತಕ್ಕೆ ಒತ್ತು ಕೊಡುತ್ತಾ ಅನುಭಾವದ ಆಳಕ್ಕೆ ಇಳಿಯುವ ಈ ವಚನ ನಮ್ಮೊಳಗಿನ ಅಲ್ಪತನವನ್ನು ವಿಡಂಬಿಸುತ್ತದೆ. ಧರ್ಮ ದೇವರ ಬಗೆಗಿನ ನಂಬಿಕೆಯಿಂದ ಏನೂ ಸಾಧನೆಯಾಗುವುದಿಲ್ಲ.

ಅದನ್ನು ತಲುಪುವ ಮಾರ್ಗ ಶುದ್ಧವಾಗಿದ್ದರೆ ಮಾತ್ರ ಪೂರ್ಣತೆ ಸಾಧ್ಯವೆಂಬುದು ಇಲ್ಲಿಯ ಸೂಕ್ಷ್ಮವಾದ ಅರ್ಥ. ಇಲ್ಲಿ ದೇವರು ಧರ್ಮಗಳ ಬಗೆಗಿನ ಬಹಳ ಸೂಕ್ಷ್ಮವಾದ ಜಿಜ್ಞಾಸೆಯ ಮೂಲಕ ಒಂದು ವೈಚಾರಿಕ ಕ್ರಾಂತಿಗೆ ಅಲ್ಲಮ ತೆರೆದುಕೊಳ್ಳುತ್ತಾನೆ.

ಈ ವೈಚಾರಿಕ ಕ್ರಾಂತಿಯ ಒಂದು ದೊಡ್ಡ ಧ್ವನಿ ಅಲ್ಲಮನ ವಿವೇಕ, ಅನುಭಾವ ಪ್ರಜ್ಞೆ, ಎಷ್ಟೋ ಸಂದರ್ಭದಲ್ಲಿ ಬಸವಣ್ಣನವರಿಗೂ ಕೂಡಾ ಈ ವಿವೇಕವನ್ನು ಬೋಧಿಸಿದವರು ಅಲ್ಲಮ ಪ್ರಭುದೇವರು. ಕಲ್ಯಾಣಕ್ಕೆ ಅಲ್ಲಮನ ಪ್ರವೇಶ ಕಥನವೇ ಒಂದು ವಿಸ್ಮಯ ವಿವೇಕ. ಅನುಭವ ಮಂಟಪಕ್ಕೆ ಅಲ್ಲಮ ಬಂದಾಗ ಬಸವಣ್ಣನವರು ಅವರನ್ನು ಕೂಡಲೆ ಶೂನ್ಯಸಿಂಹಾಧಿಪತಿಯನ್ನಾಗಿ ಮಾಡಲಿಲ್ಲ. ದೇಶ ಸಂಚಾರದ ಒಂದು ನೆವದಲ್ಲಿ ಕಲ್ಯಾಣಕ್ಕೆ ಬಂದ ಸಂಚಾರಿ ಅಲ್ಲಮನನ್ನು ನೋಡಿ ಬಸವಣ್ಣ ಅಚ್ಚರಿಗೆ ಒಳಗಾಗುತ್ತಾನೆ. ಅಲ್ಲಮ ಅನುಭವಮಂಟಪಕ್ಕೆ ಬಂದಾಗ ಬಸವಣ್ಣ ಲಿಂಗಾರ್ಚನೆಯಲ್ಲಿ ತೊಡಗಿರುತ್ತಾರೆ. ಬಳಲಿ ಬೆಂಡಾದ ದೇಹ, ಮಲಿನವಾದ ಬಟ್ಟೆಗಳು, ಕೀವಿನಿಂದ ಸೋರುತ್ತಿರುವ ಕಾಲು, ಕೆದರಿದ ಕೂದಲು ವೃದ್ಧ ರೂಪದಲ್ಲಿ ಬಾಗಿಲಲ್ಲಿ ಬಂದು ನಿಂತ ಅಲ್ಲಮನನ್ನು ಕಂಡು ಹಡಪದ ಲಿಂಗಣ್ಣನವರು ಬಸವಣ್ಣನವರಿಗೆ, ಯಾರೋ ಒಬ್ಬ ವೃದ್ಧ ಜಂಗಮ ಬಂದಿದಾನೆ, ಬಾಗಿಲಲ್ಲಿ ಕಾಯುತ್ತಿದ್ದಾನೆ ಎನ್ನುವ ವಿಷಯ ತಿಳಿಸುತ್ತಾನೆ. ಒಳಗಡೆ ಲಿಂಗಪೂಜೆಯಲ್ಲಿ ನಿರತನಾಗಿದ್ದ ಬಸವಣ್ಣನವರಿಗೆ ಆ ತಕ್ಷಣ ಹೋಗಿ ಮಾತನಾಡಲು ಸಾಧ್ಯವಾಗುವುದಿಲ್ಲ. ಅಷ್ಟರಲ್ಲಿ ಅಲ್ಲಮ ಸಿದ್ದರಾಮರ ಜೊತೆಗೆ ಬಸವಣ್ಣನವರನ್ನು ಎದುರುಗೊಳ್ಳಲು ಒಳಗೆ ಬರುತ್ತಾನೆ. ಈ ಸಂದರ್ಭ ಶೂನ್ಯ ಸಂಪಾದನೆಯಲ್ಲಿ ಬಹಳ ವಿಶಿಷ್ಟವಾಗಿ ನಿರೂಪಿತವಾಗಿದೆ. ಸಿದ್ದರಾಮನ ಜೊತೆ ಅಲ್ಲಮ ಬಂದಿದ್ದನ್ನು ನೋಡಿ ಚೆನ್ನಬಸವಣ್ಣನವರು ಗಾಬರಿಕೊಂಡು ಬಸವಣ್ಣನ ಬಳಿ ಬಂದು ಹೇಳುತ್ತಾರೆ. ಲಿಂಗಾರ್ಚನಯನ್ನು ಬಿಟ್ಟೇಳದ ಬಸವಣ್ಣ ಹಡಪದ ಅಪ್ಪಣ್ಣನವರನ್ನು ಕರೆದು ಅಲ್ಲಮನನ್ನು ಒಳಗೆ ಬರುವಂತೆ ಹೇಳಿ ಕಳುಹಿಸುತ್ತಾರೆ. ಆಗ ಚೆನ್ನಬಸವಣ್ಣನವರು ಓಡಿಬಂದು ಬಂದಿವರುವವರು ಅಲ್ಲಮಪ್ರಭು ದೇವರು ಎಂದು ಹೇಳಿದಾಗ, ಅಲ್ಲಮ 'ಅಂಗದ ಮೇಲೆ ಲಿಂಗವುಳ್ಳದನೆಲ್ಲಾ ಸೋಮನಾಥನೆಂದು ನಂಬಿದ ನಂಬಿಗೆಯ ಶರಣರ ನಿಲುವನರಿಯದಿದ್ದರೆ ತಪ್ಪಿತ್ತು ನೋಡಾ ಗುರುವೇ. ಸಂಗಮನಾಥ ಮನೆಗೆ ಅಂಗವಿಡಿದು ಬಂದರೆ ಧಿಮ್ಮನೆ ಇದಿರೆದ್ದು ವಂದಿಸಬೇಕು ನೋಡಯ್ಯಾ. ಸಂಗನ ಶರಣರು ಬಂದರೆ ಎದ್ದು ಬಂದು ಅವರನ್ನು ಇದಿರಾಗಿ ಒಳಗೆ ಕರೆದು ಧಿಮ್ಮನೆ ಇದಿರೆದ್ದು ವಂದಿಸಬೇಕು ನೋಡಯ್ಯಾ' ಅಂದಾಗ ಬಸವಣ್ಣನವರಿಗೆ ಬಹಳ ಕಳವಳವಾಗುತ್ತದೆ. ಭಯಾವರ್ಣದೊಳ್ ಮುಳುಂಗಿ ಕಂಗಳ ಭಾಷೆಗಳ್ ಮುಂದುಗಾಣದೆ ಬಸವಣ್ಣನು 'ಕೆಮ್ಮನೆ ಕೆಟ್ಟೆನು ನಿಮ್ಮ ಶರಣರು ಬಂದು ಬಾಗಿಲೊಳಿರಲು ಧಿಮ್ಮನೆ ಇದಿರೆದ್ದು ವಂದಿಸಲರಿಯದೇ ಕೆಟ್ಟ ಕೇಡನೇನೆಂದು ಉಪಮಿಸುವೆನು?' ಎಂದು ಬಂದು ಅಲ್ಲಮಪ್ರಭುದೇವರಿಗೆ ಪೊಡಮಟ್ಟು ಹೇಳ್ತಾರೆ, "ಎನ್ನ ತಪ್ಪು ಅನಂತಕೋಟಿ ಸೈರಣೆಗೆ ಲೆಕ್ಕವಿಲ್ಲ ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೇ ದಿಬ್ಯ ಕೂಡಲ ಸಂಗಮದೇವಯ್ಯಾ ನಿಮ್ಮ ಪ್ರಥಮರ ಮುಂದೆ ಕಿನ್ನರಿ ಬೊಮ್ಮಣ್ಣ ಸಾಕ್ಷಿ" ಎನ್ನುತ್ತಾ ಅಲ್ಲಮನಿಗೆ ನಮಿಸುತ್ತಾನೆ. ಆಗ ಅಲ್ಲಮ ಹೇಳುವ ವಿವೇಕ ಎಷ್ಟು ಸೂಕ್ಷ್ಮವಾದ ಒಂದು ವಿಡಂಬನೆಯು ಎಂದರೆ, ಭಕ್ತಿಯ ನೆಪದಲ್ಲಿ ಸತ್ಯವನ್ನು ಮರೆಯುವ ಮನುಜರಿಗೆ ಎಚ್ಚರಿಸುವ ಒಂದು ನುಡಿಯು ಹೌದು. "ಜಂಗಮವೇ ಹೊರಗಿರಲು ಲಿಂಗಾರ್ಚನೆ ಏವುದಯ್ಯಾ ಪ್ರಾಣನ ಹೊರಗಿರಿಸಿ ಎಡೆಯಾಡುವ ದೇಹವುಂಟೇ? ಶರಣರು ಬಂದು ಬಾಗಿಲಲ್ಲಿ ನಿಂದಿರಲು ತನ್ನ ತಾ ಮರೆದಿಪ್ಪವರ ಕಂಡಡೆ ನಮ್ಮ ಗುಹೇಶ್ವರ ಲಿಂಗ ಒಡೆಯ ಹಾಯ್ಕದೆ ಮಾಣ್ಬನೆ?" ಇಲ್ಲಿ ಗುರು ತತ್ವವೂ ಇದೆ, ಜಂಗಮತತ್ವವೂ ಇದೆ – ಅರಿವಿನ ತತ್ವವೂ ಇದೆ. ಬಸವಣ್ಣನವರಿಗೂ ವಿವೇಕವನ್ನು ಹೇಳುವ ಅಲ್ಲಮನ ನುಡಿಯಲ್ಲಿ ಇಷ್ಟು ಸೂಕ್ಮವಾದ ಹೋಲಿಕೆ ಇದೆ ಎಂದರೆ 'ಪ್ರಾಣನ ಹೊರಗಿರಿಸಿ ಎಡೆಯಾಡುವ ದೇಹವುಂಟೆ? ಜಂಗಮನೆ ಪ್ರಾಣ. ಜೀವವುಳ್ಳ ಜಂಗಮನೆ ಮೊದಲು. ಲಿಂಗ ಆಮೇಲೆ. ಹಸಿದ ಜಂಗಮನಿಗೆ ಅನ್ನ ಹಾಕಬೇಕಲ್ಲದೆ ಕಲ್ಲನಾಗರಿಗೆ ಹಾಲೆರೆಯುವ ನಿಮ್ಮ ನಿಲುವನ್ನು ಬದಲಿಸಬೇಕು' ಎನ್ನುತ್ತಾನೆ. ಆ ವಿವೇಕವನ್ನ ತಿದ್ದಿಕೊಟ್ಟವರು ಅಲ್ಲಮಪ್ರಭು. 'ದೇಹದೊಳಗೆ ದೇವಾಲಯವಿದ್ದು, ಮತ್ತೆ ಬೇರೆ ದೇಗುಲವೇಕಯ್ಯಾ, ದೇಹ–

ದೇವಾಲಯ ಪರಿಕಲ್ಪನೆ ಅಲ್ಲಮನಲ್ಲಿ ಮೊದಲು ಮೂಡಿರಬೇಕು. ಬಸವಣ್ಣನವರಿಂದ ಅದಕ್ಕೆ ಇನ್ನೂ ಹೆಚ್ಚಿನ ಸ್ಪಷ್ಟತೆ ದೊರಕಿರುವ ಸಾಧ್ಯತೆಯಿದೆ ಎಂಬ ವಾದವನ್ನು ಗಮನಿಸಿದರೆ ಅಲ್ಲಮನ ಈ ವಚನ ಇದಕ್ಕೆ ಇಂಬು ನೀಡುತ್ತದೆ.

ಕಾಲೇ ಕಂಬಗಳಾದುವೆನ್ನ, ದೇಹವೇ ದೇಗುಲವಾಯಿತ್ತಯ್ಯಾ!
ಎನ್ನ ನಾಲಗೆಯೆ ಗಂಟೆ, ಶಿರ ಸುವರ್ಣದ ಕಳಸ– ಇದೆನಯ್ಯಾ
ಸರವೆ ಲಿಂಗಕ್ಕೆ ಸಿಂಹಾಸನವಾಗಿದ್ದಿತ್ತಯ್ಯಾ
ಗುಹೇಶ್ವರಾ ನಿಮ್ಮ ಪ್ರಾಣಲಿಂಗಪ್ರತಿಷ್ಠೆ
ಪಲ್ಲಟವಾಗದಂತಿದ್ದೆನಯ್ಯಾ

ಸ್ಥಾವರ ಪರಿಕಲ್ಪನೆಗೆ ವಿರೋಧವಾಗಿ ಜಂಗಮ ಸ್ವರೂಪಿಯಾದ ದೇಹವನ್ನು ಪ್ರತಿಸ್ಥಾಪಿಸುವ ಬಸವ–ಅಲ್ಲಮರ ನಿಲುವು ದೇವಾಲಯ ಸಂಸ್ಕೃತಿಯನ್ನು ನಾಶಪಡಿಸಲು ಯತ್ನಿಸುತ್ತದೆ. ದೇಹವೇ ದೇಗುಲವಾದ ಮೇಲೆ ದೇವಾಲಯದ ಹಂಗೇಕೆ? 'ಸರವೇ ಲಿಂಗಕ್ಕೆ ಸಿಂಹಾಸನ; ನಾಲಿಗೆಯೆ ಗಂಟೆ' ಎಂಬ ಅಲ್ಲಮನ ನಿಲುವು ಬಸವಣ್ಣನವರ ವಚನಕ್ಕೆ ನೀಡಿದ ವಿಸ್ತಾರವೆಂಬಂತಿದೆ.

ಕಲ್ಲ ಮನೆಯ ಮಡಿ ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡೆದಡೆ ದೇವರೆತ್ತ ಹೋದರೊ
ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ– ಗುಹೇಶ್ವರ

ಅಲ್ಲಮಪ್ರಭು ದೇವರ ವೈಚಾರಿಕತೆಗೆ ಇಂಬು ನೀಡಿರುವುದು ಅವರ ವಿಡಂಬನಾ ಪ್ರಜ್ಞೆ, ವಿಡಂಬನೆ ಎನ್ನುವ ಪದ ಬಹಳ ಪ್ರಾಚೀನವಾದುದು ಅದನ್ನು ಇಂಗ್ಲೀಷನಲ್ಲಿ (ಸಾಟೈರ್) ಎಂದು ಕರೆಯುತ್ತಾರೆ. ಪ್ರಾಚೀನ ರೋಮನ್ನರ ಕಾಲದಲ್ಲಿಯೇ ಇದರ ಬಳಕೆ ಇತ್ತು. ಸಾಹಿತ್ಯದಲ್ಲಿ ಒಂದು ಪರಿಭಾಷೆಯಾಗಿ ವಿಡಂಬನೆ ಬಳಕೆಯಾಗುತ್ತಿದ್ದು, ದೂಷಣೆ, ಮೂದಲಿಕೆ, ವ್ಯಂಗೋಕ್ತಿ, ಕಟಕಿ, ಚುಚ್ಚು ಮಾತು, ಕಹಿನಿಂದೆ ಇತ್ಯಾದಿ ಬೇರೆ ಬೇರೆ ಹೆಸರುಗಳಲ್ಲಿ ಚಾಲ್ತಿಯಲ್ಲಿತ್ತು. ಆದರೆ ನಿಜವಾಗಿಯೂ ಸಾಹಿತ್ಯದಲ್ಲಿ ಹೇಗಿದೆ ಎಂದರೆ ಕವಿಯ ಅಂತರಂಗ, ದ್ವೇಷ, ಕ್ರೌರ್ಯ ಮೊದಲಾದ ಎಲ್ಲ ಭಾವನೆಗಳಿಂದಲೂ ಕೂಡ ಬಿಡುಗಡೆ ಹೊಂದಿ ಒಂದು ವಿಡಂಬನೆಯ ಮಾದರಿಯನ್ನು ಅದು ಪ್ರಸ್ತುತಪಡಿಸುವಂತಿದ್ದರೆ, ಅದು ನಿಜವಾದ ಸಾಹಿತ್ಯವಾಗಿ ಹೊರಹೊಮ್ಮುತ್ತದೆ. ಇದು ಬಹಳ ದೊಡ್ಡ ಮತ್ತು ಕಷ್ಟದ ಕೆಲಸ ಕೂಡ. ವಚನಕಾರರು ಕವಿ ಹೃದಯಿಗಳು. ಅವರ ಸಾಹಿತ್ಯದ ರಚನೆ ಮತ್ತು ಅದರ ವಿನ್ಯಾಸದ ಕಾರ್ಯ ಈ ಬಗೆಯ ಸಾಧ್ಯತೆಯನ್ನು ಎದುರುಗೊಳ್ಳುವುದಾಗಿದೆ. ಅಲ್ಲಮನಂತಹ ಒಬ್ಬ ಮಹಾ ಶರಣ, ಸಂತ ತಪಸ್ವಿ ಮಾಯೆಯ ಮುಟ್ಟದ ಕಾಮವನ್ನು ಹೊಂದಿರದ, ಮೋಹ ಸೋಂಕದ ಮನವಿರುವ, ಕರುಣೆ, ಆರ್ದ್ರತೆ ತುಂಬಿದ ಹೃದಯವಿರುವ, ನಿಷ್ಠೂರವಾದಿಯಾಗಿರುವ, ಅಹಂಕಾರಿಗಳ ಮದವನ್ನು ಅಳಿಸಿರುವ, ಅರಿವಿನ ಸೊಡರನ್ನು ತನ್ನೊಳಗೆ ದೀಪ್ತವಾಗಿಸುವಸದಾ ಅಲ್ಲಮ ಒಬ್ಬ ಅರಿವಿನ ಹರಿಕಾರ. ಹೊಸ ನಡೆಯ ಮಾರ್ಗಕಾರ. ಬಸವಾದಿ ಶರಣರು ಜೊತೆಗೆ ಅಲ್ಲಮಪ್ರಭು ದೇವರು ಕೂಡ ಮನುಷ್ಯನಿಗೆ ದೊರಕಬೇಕಾದಂತಹ ಅರಿವಿನ ದಾರಿಯನ್ನು ಕುರಿತು ಚಿಂತಿಸಿದವರು. ಈ ಅರಿವಿನ ದಾರಿಯಲ್ಲಿ ನಡೆಯ ತೊಡಗಿದಾಗ ವಚನಕಾರರಿಗಿರುವ ಎಚ್ಚರ ನಡೆ ನುಡಿಯ ಸ್ವಯಂ ಸಿದ್ಧಾತದಿಂದ ಬಂದಿರುವಂತದ್ದು. ಅದು ನಿರಂತರವಾಗಿ ತನ್ನನ್ನು ಪ್ರಯೋಗಶೀಲತೆಗೆ ಒಳಪಡಿಸಿಕೊಂಡು ಹುಟ್ಟಿದ ಒಂದು ಭಾವ. ಆಳವಾದ ಅನುಭವ, ಗಮ್ಯ ಅನುಭಾವ ಹರಿತ ಮಾತುಗಳಲ್ಲಿ ನಮ್ಮನ್ನು ಎಚ್ಚರಿಸುತ್ತದೆ.

ನಾ ದೇವನಲ್ಲದೆ ನೀ ದೇವನೆ?
ನೀ ದೇವನಾದಡೆ ನನ್ನನೇಕೆ ಸಲಹೆ?
ಆರೈದು ಒಂದು ಕುಡಿತೆ ಉದಕವನೆರೆವೆ
ಹಸಿದಾಗ ಒಂದು ತುತ್ತು ಓಗರವನಿಕ್ಕುವೆ
ನಾ ದೇವ ಕಾಣಾ ಗುಹೇಶ್ವರ.

ಕಲ್ಲದೇವರೆಂದು ಪೂಜಿಸುವರು.
ಆಗದು ಕಾಣಿರೊ
ಅಗಡಿಗರಾದಿರಲ್ಲಾ!
ಮುಂದೆ ಹುಟ್ಟುವ ಮಗುವಿಂಗೆ
ಇಂದೆ ಮೊಲೆಯ ಕೊಡುವಂತೆ ಗುಹೇಶ್ವರ!

ಕುರೂಪಿ ಸುರೂಪಿಯ ನೆನೆದಡೆ ಸುರೂಪಿಯಪ್ಪನೆ?
ಆ ಸುರೂಪಿ ಕುರೂಪಿಯ ನೆನೆದಡೆ ಕುರೂಪಿಯಪ್ಪನೆ?
ಧನವುಳ್ಳವರ ನೆನದಡೆ ದಾರಿದ್ರ್ಯ ಹೋಹುದೆ?
ಪುರಾತನರನು ನೆನೆದು ಕೃತಾರ್ಥರಾದೆವೆಂಬರು,
ತಮ್ಮಲ್ಲಿ ಭಕ್ತಿ ನಿಷ್ಠೆಯಿಲ್ಲದವರ ಕಂಡಡೆ ಮೆಚ್ಚನು ಗುಹೇಶ್ವರನು.

ಈ ವಚನಗಳ ತೀಕ್ಷ್ಣತೆಯನ್ನು ಗಮನಿಸಬೇಕು. ಸರಳವಾಗಿ, ನೇರವಾಗಿ ಮಾತುಗಳಲ್ಲಿ ಹೇಳದೆ ಅದನ್ನು ಕಾವ್ಯಾತ್ಮಕವಾಗಿ ಉಪಮೆಗಳ ಮೂಲಕ ಹೇಳುವ ರೀತಿ ಅದ್ಭುತ. ಇಲ್ಲಿನ ಹೋಲಿಕೆಗಳು ಎಷ್ಟು ಅರ್ಥಪೂರ್ಣವಾಗಿದೆಯೆಂದರೆ ಎಂತವರೂ ಅದನ್ನು ನೆನಪಿಟ್ಟುಕೊಂಡು ಮನನ ಮಾಡುವಂತಿದೆ. ಮೇಲಿನ ಮೂರೂ ವಚನಗಳು ದೇವರನ್ನು ಅರ್ಥೈಸುವಿಕೆಗೆ ಹೊಸ ಆಲೋಚನಾತ್ಮಕ ಪರಿಕರವನ್ನು ಒದಗಿಸುತ್ತವೆ. ಮೆಲ್ನೋಟಕ್ಕೆ ಕಾಣುವ ಭಕ್ತಿಯನ್ನು ವಿಡಂಬಿಸುತ್ತವೆ. ಹಸಿದಾಗ ಅನ್ನವನ್ನಿಕ್ಕುವವನು, ಬಾಯಾರಿಕೆಯಾದಾಗ ಒಂದು ಕುಡಿಕೆ ನೀರು ಕೊಡುವವನು ದೇವರಾಗುತ್ತಾನೆ ಎನ್ನುವ ಸಾಮಾಜಿಕ ವಿವೇಕ ಪರಂಪರಾಗತ ದೇವರ ತಿಳುವಳಿಕೆಗೆ ಸಡ್ಡು ಹೊಡೆಯುವಂತಿದೆ. ಹಾಲು, ನೀರೆರೆದು ಕಲ್ಲನ್ನು ದೇವರೆಂದು ಪೂಜಿಸುವ ಪರಿ ಹೇಗಿದೆ ಎಂದರೆ ಮುಂದೆ ಹುಟ್ಟುವ ಮಗುವಿಗೆ ಇಂದೆ ಹಾಲು ಕೊಟ್ಟಂತೆ ಎಂಬ ಮಾತು, ಭಕ್ತಿ ಶ್ರದ್ಧೆ ಇಲ್ಲದವನು ಹಿರಿಯ ಶರಣರ ನೆನೆದ ಮಾತ್ರಕ್ಕೆ ಭಕ್ತನಾಗುತ್ತಾನೆ ಎಂಬ ಭ್ರಮೆಯನ್ನು ಅಲ್ಲಗಳೆಯುವುದಕ್ಕೆ ಅವರು ಕೊಡುವ ಹೋಲಿಕೆಯಲ್ಲಿ ಎಂತ ಪ್ರಾಯೋಗಿಕ ವಿಚಾರಗಳು ಅಡಗಿದೆ ಎನ್ನುವುದು ಚಿಂತನಾರ್ಹ. ಒಟ್ಟಿನಲ್ಲಿ ಅಲ್ಲಮಪ್ರಭುದೇವರ ವೈಚಾರಿಕತೆ ಸದಾ ಕಾಲದ ವಿವೇಕವಾಗಿ ಕೆಲಸ ಮಾಡುವುದಂತೂ ನಿಜ.

**ಆಧಾರ ಗ್ರಂಥಗಳು:**

೧. ಅಲ್ಲಮಪ್ರಭು : (ಸಂ.) ಡಾ.ವಿ. ಚಂದ್ರಶೇಖರ ನಂಗಲಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ (ಸಂಪುಟ ೧) ೨೦೧೧
೨. ಅಲ್ಲಮ ಪ್ರಭುದೇವರು : ಚರಿತ್ರೆ, ಸಂಸ್ಕೃತಿ. ಜ್ಞಾನದ ಶೋಧಗಳು : ಡಾ. ವಿಜಯಾದೇವಿ, ಸುಮಾ ಪ್ರಕಾಶನ, ಮಲ್ಲೇಶ್ವರ ಬೆಂಗಳೂರು (೨೦೨೧)

೩. ಅಲ್ಲಮನ ವಚನಗಳು: ಡಾ.ಪಿ.ವಿ.ನಾರಾಯಣ, ಅಂಕಿತ ಪ್ರಕಾಶನ ಬೆಂಗಳೂರು(೨೦೧೮)
೪. ವಚನ ಸಾಹಿತ್ಯ ಸಂಗ್ರಹ: (ಸಂ.) ಸಂ.ಶಿ.ಭೂಸನೂರಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು (೨೦೦೬)
೫. ಲಿಂಗಾಯತ ಕನ್ನಡದ ವಚನಧರ್ಮ: ಎಸ್.ಜಿ.ಸಿದ್ಧರಾಮಯ್ಯ, ಸ್ವಪ್ನ ಬುಕ್ ಹೌಸ್ ಬೆಂಗಳೂರು(೨೦೧೯)